

# ಸಂಜನಾ ಬ್ಯಾಂಗ್ ಬ್ಯಾಂಗ್

**ಚಂದನ್ ಶೆಟ್ಟಿ ಜೊತೆ 'ಡ್ಯಾಶ್' ಹಾಡಿಗೆ ಹೆಜ್ಜೆ ಹಾಕಿದ್ದ ನಟಿ ಸಂಜನಾ ಆನಂದ್ ಇದೀಗ 'ಗೌರಿ' ಸಿನಿಮಾದಲ್ಲಿ ವಿಶೇಷ ಹಾಡಿಗೆ ನೃತ್ಯ ಮಾಡಿದ್ದಾರೆ.**

ನಟಿ ಸಂಜನಾ ಆನಂದ್, ಸಿನಿಮಾಗಳ ಜೊತೆಜೊತೆಗೆ ವಿಶೇಷ ಹಾಡುಗಳಿಗೆ ಹೆಜ್ಜೆ ಹಾಕುತ್ತಿದ್ದಾರೆ. ಸದ್ಯ ಇಂದ್ರಜಿತ್ ಲಂಕೇಶ್ ನಿರ್ದೇಶನದ 'ಗೌರಿ' ಸಿನಿಮಾದಲ್ಲಿ ಹಾಡೊಂದಕ್ಕೆ ನೃತ್ಯ ಮಾಡಿದ್ದಾರೆ.

ಈಚೆಗೆ ಚಂದನ್ ಶೆಟ್ಟಿ ಜೊತೆ 'ಸೂತ್ರಧಾರಿ' ಸಿನಿಮಾದಲ್ಲಿ 'ಡ್ಯಾಶ್' ಹಾಡಿನಲ್ಲಿ ಕಾಣಿಸಿಕೊಂಡಿದ್ದರು ಸಂಜನಾ. ಚಂದನ್ ಹಾಗೂ ಸಂಜನಾ ಜೋಡಿಯ ಈ ಹಾಡು ಸಖತ್ ಹಿಟ್ ಆಗಿತ್ತು. ಇದೀಗ ಮತ್ತೆ ಅಂಥದ್ದೊಂದು ಯಶಸ್ಸಿನ ನಿರೀಕ್ಷೆಯಲ್ಲಿದ್ದಾರೆ.

'ಗೌರಿ' ಸಿನಿಮಾದ ಹಾಡಿನ ಕುರಿತು ಮಾತನಾಡಿರುವ ಸಂಜನಾ, 'ಇದು ಬ್ಯಾಂಗ್ ಬ್ಯಾಂಗ್ ಹಾಡು. ಹಾಡು ಕೇಳುತ್ತಿದ್ದಂತೆ ನಿಮ್ಮ ಕಾಲುಗಳು ಗೊತ್ತೇ ಆಗದಂತೆ ತಾಳ ಹಾಕಲು ಶುರು ಮಾಡುತ್ತವೆ. ನಿಮ್ಮನ್ನೂ ನೃತ್ಯ ಮಾಡಲು ಪ್ರೇರೇಪಿಸುತ್ತದೆ. ಈ ಹಾಡು ಪಾತ್ರವೊಂದನ್ನು ಅತಿ ಸುಂದರವಾಗಿ ಬಿಂಬಿಸುತ್ತದೆ. ಇಷ್ಟು ವರ್ಷಗಳಲ್ಲಿ, ಹಾಡೆಂದರೆ ನಮ್ಮ ಕಣ್ಣ ಮುಂದೆ ಬರುತ್ತಿದ್ದ ಚಿತ್ರಣವನ್ನು ಈ ಹಾಡು ಬದಲಿಸಲಿದೆ. ನಾನು ಇದರಲ್ಲಿ ತೊಡಗಿಕೊಂಡಿದ್ದು ಕೂಡ ಭಿನ್ನ ಅನುಭವ. ಇದು ಸುಮ್ಮನೆ ಒಂದು ಹಾಡಿನಂತಿಲ್ಲ. ಸಿನಿಮಾವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ, ಹಾಗೆಯೇ ಸಿನಿಮಾಗೆ ತೂಕ ನೀಡುವ ಹಾಡು. ಹೀಗಾಗಿಯೇ ಈ ಹಾಡಿನಲ್ಲಿ ತೊಡಗಿಕೊಳ್ಳಲು ಆಸಕ್ತಿ ತೋರಿದೆ' ಎಂದು ಹಾಡಿ ಹೊಗಳಿದ್ದಾರೆ.

ನಾಲ್ಕು ಸಂಗೀತ ಸಂಯೋಜಕರು ಸೇರಿ ಈ ಆಲ್ಬಂ ಹಾಡು ರೂಪಿಸಿದ್ದಾರೆ. ಬೇರೆ ಬೇರೆ ಪ್ರಕಾರದ ಸಂಗೀತ ಮಿಶ್ರಣದ ಹಾಡಾಗಿದ್ದು, ಶಿವು ಗರಗಿ, ಜಸ್ಸೀ ಗಿಫ್ಟ್, ಚಂದನ್ ಶೆಟ್ಟಿ ಹಾಗೂ ಅನಿರುದ್ಧ ಶಾಸ್ತ್ರಿ ಅವರ ಸಂಗೀತ ಸಂಯೋಜನೆಯಿದೆ.

'ಕನ್ನಡದಲ್ಲಿ ಇದು ಹೊಸ ಪ್ರಯತ್ನ. ಸಂಗೀತ ಸಂಯೋಜಕರ ಜೊತೆಗೆ, ಕೈಲಾಶ್ ಖೇರ್, ಜಾವೇದ್ ಅಲಿ, ನಿಹಾಲ್ ಟೌರೊ. ಅನಿರುದ್ಧ ಶಾಸ್ತ್ರಿ, ಅನನ್ಯಾ ಭಟ್ ತಮ್ಮ ಧ್ವನಿ ನೀಡಿದ್ದಾರೆ' ಎಂದು ಹೇಳಿದ್ದಾರೆ ನಿರ್ದೇಶಕ ಇಂದ್ರಜಿತ್ ಲಂಕೇಶ್.

ಎರಡು ದಿನಗಳ ತಾಲೀಮಿನ ನಂತರ ಎರಡು ದಿನದಲ್ಲಿ ಹಾಡಿನ ಚಿತ್ರೀಕರಣ ಮುಗಿದಿದೆ. ಈ ಹಾಡು ನೋಡುಗರ ಹೃದಯ ಕುಣಿಸುವ ನಿರೀಕ್ಷೆ ಚಿತ್ರತಂಡಕ್ಕಿದೆ. ■